**ದಿಃ06.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ-**ಪ್ರತಿವಾದಿ ಪರ ಶ್ರೀ.**K.M.B.,** ವಕೀಲರಿಂದಃ-

ವಾದಿ ವೀರಣ್ಣ ನಮ್ಮ ಊರಿನವರು ಇರುತ್ತಾರೆ . ವಾದಿ ವೀರಣ್ಣ ಅವರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿ ವಾದಿ ವೀರಣ್ಣ ಅವರುಗೋತ್ತು ಅವರ ಅಣ್ಣ ತಮ್ಮಂದಿರ ಬಗ್ಗೆ ಗೋತ್ತಿಲ್ಲ . ವಾದಿ ವೀರಣ್ಣ ಅವರಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಗೋತ್ತಿಲ್ಲ . ವಾದಿ ವೀರಣ್ಣ ಅವರ ತಂದೆ ತಾಯಿ ನೋಡಿರುತ್ತೇನೆ .ವಾದಿಯ ತಂದೆ ಚನ್ನಬಸಪ್ಪ ತಾಯಿ ಸಿದ್ದಲಿಂಗಮ್ಮ ಇರುತ್ತಾರೆ ಎಂದರೆ ಸರಿ. ವಾದಿಯು ನಮ್ಮ ಊರಿನಲ್ಲಿ ಹಲವಾರು ವರ್ಷದಿಂದ ಕಿರಾಣಿ ಅಂಗಡಿ ನಡೆಸುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ವೆ ನಂಬರ್ 92 ಇರುತ್ತದೆ , ಅದರ ವಿಸ್ತೀರ್ಣ 2 ಎಕರೆ 38 ಗುಂಟೆ ಇರುತ್ತದೆ . ನಾನು ದಾವಾ ಆಸ್ತಿ ವಾದಿಗೆ ಹೇಗೆ ಬಂದಿರುವ ಬಗ್ಗೆ ದಾಖಲೆಗಳನ್ನು ನೋಡಿರುವುದಿಲ್ಲ . ದಾವಾ ಆಸ್ತಿ ಪಕ್ಕದಲ್ಲಿ ನನಗೆ ಸಂಬಂದಿಸಿದ ಸರ್ವೆ ನಂಬರ್ 90/1 ಜಮೀನು ಇರುತ್ತದೆ . ಸದರಿ ಜಮೀನು ಕೂಡ ಊರಲಕಟ್ಟೆ ಗ್ರಾಮಕ್ಕೆ ಸಂಬಂದಿಸಿದ್ದು ಇರುತ್ತದೆ . ನನ್ನ ಜಮೀನಿನ ದಕ್ಷಿಣ ದಿಕ್ಕಿಗೆ ಊರಲಕಟ್ಟೆ ಗ್ರಾಮಸ್ಥರು ಇರುತ್ತಾರೆ ಅವರ ಹೆಸರು ಗೋತ್ತಿರುವುದಿಲ್ಲ . ನನ್ನ ಜಮೀನಿನ ದಕ್ಷಿಣ ದಿಕ್ಕಿಗೆ ಒಂದು ಜಮೀನು ನಂತರ ಸರ್ವೆ ನಂಬರ್ 88/3, 88/6 ಎರಡು ತುಂಡು ಜಮೀನುಗಳು ಇರುತ್ತಾರೆ ಎಂದರೆ ನನಗೆ ಗೋತ್ತಿಲ್ಲ . ಸದರಿ ಜಮೀನುಗಳು ಊರಲಕಟ್ಟೆ ಗ್ರಾಮದ ರವಿಕುಮಾರ ತಂದೆ ರೇವಣಸಿದ್ದಪ್ಪ ಅವರಿಗೆಸೇರಿದ್ದು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಸರ್ವೆ ನಂಬರ್ 90/1 ಜಮೀನಿನ ಚೆಕ್ ಬಂದಿ ಪೂರ್ವಕ್ಕೆಃ ಶಾರದಮ್ಮ ಅವರ ಜಮೀನು , ಪಶ್ಚಿಮಕ್ಕೆಃ ಮೌನಾಚಾರ ಅವರ ಜಮೀನು , ಉತ್ತರಕ್ಕೆಃ ವಾದಿ ವೀರಣ್ಣ ಜಮೀನು ಮತ್ತು ದಕ್ಷಿಣಕ್ಕೆಃ ಊರಲಕಟ್ಟೆ ಯವರು ಜಮೀನು ಅವರ ಹೆಸರು ಗೋತ್ತಿಲ್ಲ . ನಾನು ಸದರಿ ಜಮೀನನ್ನು ಸಾಗುವಳಿ ಮಾಡಿ ಬಟ್ಟಿ 4-5 ವರ್ಷ ಆಗಿರುತ್ತದೆ . ನನಗೆ ಸಾಗುವಳಿ ಮಾಡಲು ಬಿಟ್ಟ ನಂತರ ನನ್ನ ಜಮೀನಿನ ಸುತ್ತಾ ಮುತ್ತಾ ಯಾರು ಸಾಗುವಳಿ ಮಾಡುತ್ತಾರೋ ನಿಖರವಾಗಿ ಗೋತ್ತಿರುವುದಿಲ್ಲ ಎಂದರೆ ಸರಿ. ವಾದಿಯ ಸಹೋದರ ಕಂಬಾರ ಸಿದ್ದಪ್ಪ ಅವರ ಸಹ ದಿದ್ದಿಗಿಯಲ್ಲಿ ವಾಸ

ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಅವರ ಕುಟುಂಬಕ್ಕೆ ಸಂಬಂದಿಸಿದ ಆಸ್ತಿಗಳನ್ನು ಈ ಹಲವಾರು ವರ್ಷಗಳ ಹಿಂದೆ ಸ್ವಾಧೀನ ಮಾಡಿಕೊಂಡು ಅನುಬೋಗ ಇರುತ್ತಾರೆ ಎಂದರೆ ನನಗೆ ಗೋತ್ತಿಲ್ಲ . ನನ್ನ ಮುಖ್ಯ ವಿಚಾರಣೆಯು ಪ್ರಮಾಣ ಪತ್ರದಲ್ಲಿ ತಿಳಿಸಿರುವ ಹಾಗೆ ಪಂಚಾಯತಿ ನಡೆದ ಬಗ್ಗೆ ಯಾವ ವರ್ಷಗೋತ್ತಿಲ್ಲ . ಸದರಿ ಪಂಚಾಯತಿಯಲ್ಲಿ ಯಾರು ಬಾಗವಹಿಸಿರುವ ಬಗ್ಗೆ ನನಗೆ ಗೋತ್ತಿಲ್ಲ . ವಾದಿ ವೀರಣ್ಣ ಅವರ ತಂದೆ ಚನ್ನಬಸಪ್ಪ ಅವರು ತೀರಿಹೋಗಿ ಈ ಸುಮಾರು 20 ವರ್ಷಕ್ಕಿಂತ ಮೇಲೆ ಆಗಿರುತ್ತದೆ . ದಾವಾ ಆಸ್ತಿಯು ಊರಲುಕಟ್ಟೆ ಗ್ರಾಮಕ್ಕೆ ಸೇರಿದ ಜಮೀನು ಇರುತ್ತದೆ . ನಾನು ವಾದಿಯ ಸಂಬಂದಿಕ ಇರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿ ವಿಶ್ವಾಸಿಗರು ಇರುವ ಕಾರಣ ಅವರ ಪರವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಅವರ ತಂದೆ ಎಂದಿಗೂ ಸಹ ಸ್ವಾಧೀನ ಅನುಭವ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸರಿ ಇದೆ

ಸಹಿ/-

ಸಿವಿಲ್ ನ್ಯಾಯಾಧೀಶರು**,** ಜಗಳೂರು